**ಪಾಟೀಸವಾಲುಃ ಎದುರುದಾರರ ಪರ ಶ್ರೀ ಕೆ ಆರ್ ಆರ್ ವಕೀಲರಿಂದಃ**

1. ಅಪಘಾತ ಆಗಿತ್ತು ಎಂದು ಹೇಳುವ ದಿನ ದ್ವಿಚಕ್ರ ವಾಹನದ ಸಹಸವಾರನಾಗಿ ನಾನು ಹಿಂಬದಿಯಲ್ಲಿ ಕುಳಿತಿದ್ದು ಸದರಿ ವಾಹನ ನನಗೆ ಸೇರಿದ್ದು. ಸದರಿ ದ್ವಿಚಕ್ರ ವಾಹನವನ್ನು ಆ ದಿನ ಬಾಶಾ ಎಂಬ ಹುಡುಗ ಚಾಲನೆ ಮಾಡುತಿದ್ದರು. ಸದರಿ ಬಾಶಾ ನಮ್ಮ ಗ್ರಾಮದ ವಾಸಿ ಮತ್ತು ನನ್ನ ಸಂಬಂದಿ. ನನಗೆ ಕೈ ನೋವು ಇದ್ದ ಕಾರಣ ಚಾಲನೆ ಮಾಡಲು ಆತನಿಗೆ ನೀಡಿದ್ದೆ. ಅಪಘಾತ ಆಗಿತ್ತು ಎಂದು ಹೇಳುವ ದಿನ ನನ್ನ ಬಲಗೈ ಬುಜ ನೋವಿನಿಂದ ಇತ್ತು ಕಾರಣ ಹೊಲದಲ್ಲಿ ಕೆಲಸ ಮಾಡಿ ನೋವಾಗಿತ್ತು. ದ್ವಿಚಕ್ರ ವಾಹನ ಚಾಲನೆ ಮಾಡುತಿದ್ದ ಬಾಶಾ ಗೆ ಚಾಲನ ಪರವಾನಗಿ ಇತ್ತು ಹಾಜರುಪಡಿಸಿಲ್ಲ. ಹಾಜರುಮಾಡಬಹುದು.

2. ಬಾಶಾ ಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಆತನಿಗೆ ಯಾವುದೇ ಚಾಲನಾ ಪರವಾನಗಿ ಇರಲಿಲ್ಲ ಅಪಘಾತ ಆತನ ನಿರ್ಲಕ್ಷತನ ಮತ್ತು ಅಜಾಗರೂಕತೆಯಿಂದ ಆಗಿದ್ದು ಎದುರುದಾರರು ಪರಿಹಾರ ನೀಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ದಿನ ಕೆ ಎಸ್ ಆರ್ ಟಿ ಸಿ ಬಸ್ ಎದುರುಬಾಗದಿಂದ ಬರುತ್ತಿತ್ತು. ಅಪಘಾತ ರಸ್ತೆಯಲ್ಲಿ ಆಗಿದ್ದು ಸದರಿ ಸ್ತಳದಲ್ಲಿ ರಸ್ತೆಯ ಅಕ್ಕಪಕ್ಕದಲ್ಲಿ ಮರಗಳು ಇವೆ. ಮರಗಳು ರಸ್ತೆಗೆ ಅಡ್ಡವಾಗಿ ಇದ್ದು ಎದುರುಗಡೆಯಿಂ ದ ಬರುವ ವಾಹನಗಳು ಕಾಣಿಸದೇ ಇದ್ದು ಕಾರಣ ದ್ವಿಚಕ್ರ ವಾಹನದ ಚಾಲಕ ಮತುತ ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಇಬ್ಬರ ಅಜಾಗರೂಕತೆ ಮತ್ತು ನಿರ್ಲಕ್ಷತನದಿಂ ಅಪಘಾತ ಆಗಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಪಕ್ಕಕ್ಕೆ ಹೋಗಿದ್ದೆವು ಇನ್ನೊಂದು ದ್ವಿಚಕ್ರ ವಾಹನ ಬಂದಿದ್ದು ಬಸ್ ನಮ್ಮ ಕಡೆಗೆ ಬಂದು ಡಿಕ್ಕಿಪಡಿಸಿತ್ತು ಎಂದು ಸ್ವತಃ ನುಡಿಯುತ್ತಾರೆ.

3. ಅಪಘಾತದಿಂದ ಬಲ ಬುಜದ ಮೂಳೆ ಮುರಿತ, ಬಲಗೈ ನರ ಮುರಿತ,

ಎಡಗೈ ನ ಮುಂಗೈ ಮೂಳೆ ಮುರಿತ ಉಂಟಾಗಿರುತ್ತದೆ. ಅಪಘಾತ ಆದ ತಕ್ಷಣ ದಾವಣಗೆರೆಯ ಎಸ್ ಎಸ್ ಐ ಎಂ ಎಸ್ ಆಸ್ಪತ್ರೆಗೆ ಒಂದು ದಿನ ದಾಖಲಾಗಿದ್ದೆ. ನಂತರ ಮಂಗಳೂರಿನ ಎನಪೋಯ ಆಸ್ಪತ್ರೆಯಲ್ಲಿ 2 ತಿಂಗಳು ಚಿಕಿತ್ಸೆಗೆ ದಾಖಲಾಗಿದ್ದೆ. 2 ದಿನ ದಾವಣಗೆರೆಯ ನಿತಿನ್ ವೈದ್ಯರ ಬಳಿ ಚಿಕಿತ್ಸೆ ಪಡೆದು ಪುನಃ ಕೊಯಿಮತ್ತೂರಿನ ಗಂಗಾ ಆಸ್ಪತ್ರೆಯಲ್ಲಿ ಒಂದು ವಾರಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ.

4. ಏಪ್ರಿಲ್ 25 ರ ನಂತರ ನಾನು ಅಪಘಾತ ಸಂಬಂದ ಯಾವುದೆ ಆಸ್ಪತ್ರೆಗೆ ಹೋಗಿಲ್ಲ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಯಾವುದೇ ಅಂಗನ್ಯೂನತೆ ಆಗಿಲ್ಲ ನಿಪಿ.7 ದಾಖಲೆಯನ್ನು ವೈದ್ಯರೊಂದಿಗೆ ಶಾಮಿಲಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ.123 ರಿಂದ 135 ದಾಖಲೆಗಳಂತೆ ನಾನು ಯಾವುದೇ ವೈದ್ಯಕೀಯ ವೆಚ್ಚ ನೀಡಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಅಜಾಗರೂಕತೆಯಿಂದ ಆಗಿದ್ದು ಕಾರಣ ಎದುರುದಾರ ಸಂಸ್ತೆ ಯಾವುದೇ ಪರಿಹಾರ ನೀಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**